1980ರ ದಶಕದಲ್ಲಿ ನಾನೂ ಬರವಣಿಗೆ ಆರಂಭಿಸಿ ಒಂದಿಷ್ಟು ಹೆಸರು ಮಾಡಿದ್ದೆ. ಒಂದೆರಡು ಕಾದಂಬರಿ ಬೇರೆ ಸಿನಿಮಾ ಆಗುತ್ತಿದ್ದವು. ಹೀಗಾಗಿ, ದುರ್ಗದ ನನ್ನ ಗೆಳೆಯರು 'ನೀನಾದರೂ ಮದಕರಿಯ ಬಗ್ಗೆ ಕಾದಂಬರಿ ಬರೆಯಲೋ' ಅಂತ ನನ್ನ ಬೆನ್ನು ಬಿದ್ದಿದ್ದರು. ಐತಿಹಾಸಿಕ ಕಾದಂಬರಿ ಎಂದರೆ ತಮಾಷೆನಾ. 'ಬೇಡ ಕಣ್ರೋ, ಹೆಂಗೂ ಮರಡಿಹಳ್ಳಿ ಸೀತಾರಾಮಶಾಸ್ತ್ರಿ ಅವರು 'ರಾಜ ವೀರ ಮದಕರಿನಾಯಕ' ನಾಟಕ ಬರೆದಿದ್ದಾರಲ್ಲಾ... ಮತ್ತೇಕೆ?' ಎಂದು ಸಮಾಧಾನ ಪಡಿಸಲೆತ್ನಿಸಿದೆ. ಗೆಳೆಯರು ಬಿಡಲಿಲ್ಲ. ಸರಿ, ಆಯ್ತು ನೋಡಿಯೇ ಬಿಡೋಣವೆಂದು ಜಿದ್ದಿಗೆ ಬಿದ್ದೆ. ಜೋಯಿಸರ, ಎಂ.ಎಸ್. ಪುಟ್ಟಣ್ಣನವರ ಪುಸ್ತಕಗಳು, ಬಿಡಿ ಲೇಖನಗಳು, ಚಿತ್ರದುರ್ಗದ ಬಖೈರು, ಗೆಜೆಟಿಯರ್, ಹಳೆ ಕಾಗದ ಪತ್ರಗಳನ್ನೆಲ್ಲಾ ರಾಶಿ ಹಾಕಿಕೊಂಡು ಓದಿ ಕಸರತ್ತು ಮಾಡುತ್ತಾ ಕಾದಂಬರಿ ಬರೆಯಲು ತೊಡಗಿದೆ. ಆ ದಿನಗಳಲ್ಲೇ ತ.ರಾ.ಸು. ಬರೆಯುತ್ತಿದ್ದಾರೆಂಬ ಬಾತ್ಮೆ ಬಂತು. ನಡುಗಿ ಹೋದೆ. ಎಲ್ಲಿಯ ಗೊಡವೆಯೆಂದು ಬರವಣಿಗೆ ನಿಲ್ಲಿಸಿದೆ. ಆದರೆ, ಗೆಳೆಯರು ಕೇಳವಲ್ಲರು. 'ನೀನೂ ಬರೀತಿರೋದು ಸುದ್ದಿಯಾಗಿದೆ ಕಣೋ. ಹೆದರ್ಕೊಂಡು ಬಿಟ್ಟ ಅಂತಾರಯ್ಯ. ನೀನೂ ಬರಿ, ಅವರೂ ಬರೀಲಿ, ಮದಕರಿನಾಯಕನೇನು ಯಾರ ಜಹಗೀರಲ್ಲ' ಎಂದು ಹಂಗಿಸಿದರು. ದೊಡ್ಡ ಪೈಲ್ವಾನರ ಮೇಲೆ ಕುಸ್ತಿ ಸೋತರೂ ಹೆಸರು, ಗೆದ್ದರೂ ಹೆಸರು ಅಂದ್ಕೊಂಡೆ. ನಾನು ಬರೆಯಕೂಡದೆಂದು ಧಮಕಿಗಳು ಬಂದವು. ಊರಿನ ಜಿಲ್ಲಾಧಿಕಾರಿ, ಜಿಲ್ಲಾ ವರಿಷ್ಠಾಧಿಕಾರಿಗಳೇ ಕಚೇರಿಗೆ ಕರೆಸಿ, 'ತ.ರಾ. ಸು. ಬರೆವಾಗ ನೀನ್ ಯಾಕಯ್ಯಾ ಬರೀತಿಯಾ? ನಿಲ್ಲಿಸಿ ಬಿಡು' ಎಂದು ತಿಳಿ ಹೇಳಿದರು. ಊರಿನ ಮಂದಿಯೂ ಹಂಗೆ ಗರಮ್ ಆದರು. ಬರಿಬೇಡ ಅಂತ ಹೆಚ್ಚು ಒತ್ತಡ ಬಂದಿದ್ದರಿಂದಲೋ ಏನೋ ಬೇಗ ಬರೆದು ಮುಗಿಸಿದೆ. ಕೋಟೆಯ ಮೇಲೆ ಬಿಡುಗಡೆಯೂ ಆಯಿತು. ಊರಿನ ಜನರೆಲ್ಲಾ ಅಂದು ಕೋಟೆಯ ಮೇಲಿದ್ದರು. ಅದು ಮದಕರಿಯ ಬಗ್ಗೆ ನಮ್ಮ ದುರ್ಗದವರಿಗಿದ್ದ ಕುತೂಹಲ, ಆದರಾಭಿಮಾನ. ಪುಸ್ತಕದ ಬಗ್ಗೆ 'ಕನ್ನಡ ಪ್ರಭ'ದಲ್ಲಿ ಜಿ.ಎಸ್. ಕೇಶವಾಚಾರ್ಯ, 'ಪ್ರಜಾವಾಣಿ'ಯಲ್ಲಿ ಟಿ.ಪಿ. ಅಶೋಕ ಮೆಚ್ಚಿ ಬರೆದರು. ಆಗ ಎದುರುಪಾರ್ಟಿ ಅವರಿಗೇನನಿಸಿತೋ! ವೇಣು ಬರೆದ 'ಗಂಡುಗಲಿ ಮದಕರಿನಾಯಕ' ಇತಿಹಾಸದ ವಿಕೃತ ರೂಪವೆಂದು ತ.ರಾ.ಸು. ಲಿಪಿಕಾರ ನಾ. ಪ್ರಭಾಕರ ಬರೆದು ವಾದ ವಿವಾದ ಹುಟ್ಟು ಹಾಕಿದರು. ಐದಾರು ವಾರ ವಿವಾದಗಳು ನಡೆದವು. ನಾನೂ ಉತ್ತರಿಸಿ ಸಮರ್ಥಿಸಿಕೊಂಡೆ. ಹೀಗೇ ಏನೇನೋ ಫಜೀತಿಗಳು...

ನಾನು ಬರೆದು ಒಂದು ವರ್ಷದ ಮೇಲೆ ತ.ರಾ.ಸು. ಬರೆದ 'ದುರ್ಗಾಸ್ತಮಾನ' ಕಾದಂಬರಿ ದುರ್ಗದಲ್ಲಿ ಅದ್ದೂರಿಯಾಗಿ ಬಿಡುಗಡೆಯಾಯಿತು. ಕಾದಂಬರಿಯನ್ನು ಪಲ್ಲಕ್ಕಿಯಲ್ಲಿಟ್ಟು ಉತ್ಸವಾಂಬ ದೇವಾಲಯದಿಂದ ಪೊಲೀಸ್ ಪರೇಡ್ ಮೈದಾನದವರೆಗೆ ಮೆರವಣಿಗೆಯಲ್ಲಿ ಮಂತ್ರ ಘೋಷಗಳೊಂದಿಗೆ ತಂದು ಬಿಡುಗಡೆಗೊಳಿಸಿದರು. ಮೆರವಣಿಗೆಯಲ್ಲಿ, ಸಮಾರಂಭದಲ್ಲಿ ನಾನು, ಗೆಳೆಯ ಸಾಹಿತಿ ಕೆ. ವೆಂಕಣ್ಣಚಾರ್ ಜೊತೆಗಿದ್ದೆವು. ತ.ರಾ.ಸು. ಅವರನ್ನು ಗೌರವಿಸಲಾಯಿತು. ನಾನಂತೂ ಅಂದು ಕೃತಿ ಕೊಂಡುತಂದು ರಾತ್ರಿಯಿಂದಲೇ ಕೃತಿಯನ್ನು ಓದಲಾರಂಭಿಸಿದೆ. ತ.ರಾ.ಸು. ತಮ್ಮ ಕೊನೆಯ ಕೃತಿಯಲ್ಲಿ ತಮ್ಮ ಎಲ್ಲಾ ಭಾಷಾ ಪಾಂಡಿತ್ಯ, ಪ್ರತಿಭೆ, ಒಳನೋಟ, ಸಂಶೋಧನಾ ಚಿಕಿತ್ಸಕ ನೋಟ ಗರಗಸದಂತಹ ಶೈಲಿ ಎಲ್ಲವನ್ನೂ ಧಾರೆ ಎರೆದುಬಿಟ್ಟಿದ್ದರು. ಕಾಯಿಲೆಯ ನಡುವೆಯೂ ಬರೆಯುತ್ತಾ ತಮ್ಮ ಶಿಷ್ಯ ಲಿಪಿಕಾರ ನಾ. ಪ್ರಭಾಕರನಿಗೆ ಹೇಳಿ ಬರೆಸಿದ್ದು ಕೂಡ ಅವರ ಅದಮ್ಯ ಉತ್ಸಾಹ, ಛಲವಂತಿಕೆ ದುರ್ಗಾಭಿಮಾನದ ಪ್ರತೀಕವೆಂದರೆ ಅತಿಶಯೋಕ್ತಿಯಾಗದು. ಕಾದಂಬರಿಯಲ್ಲಿ ನಾಯಕನನನ್ನು ಅತ್ಯಂತ ಕ್ರೂರಿ, ವ್ಯಭಿಚಾರಿ, ಸ್ತ್ರೀಲಂಪಟ, ಕುಡುಕ ಎಂದೆಲ್ಲಾ ಚಿತ್ರಿಸಿದರೂ ಅವನಲ್ಲಿನ ಶೌರ್ಯ, ಕ್ರೌರ್ಯ, ಪರಾಕ್ರಮವನ್ನು ಅಷ್ಟೇ ಕಣ್ಮುಂದೆ ಕಟೆದು ನಿಲ್ಲಿಸಿದ್ದಾರೆ. ಆದರೆ, ದುರ್ಗದ ಪತನಕ್ಕೆ ಕಾರಣನೆಂದು ಇತಿಹಾಸದಲ್ಲಿ